# ಹರಿಕಥಾಮೃತಸಾರ ಸ್ವಗತ ಸ್ವಾತಂತ್ರ್ಯ ಸಂಧಿ

ಹರಿಕಥಾಮೃತಸಾರ ಗುರುಗಳ ಕರುಣದಿಂದಾಪನಿತು ಪೇಳುವೆ |

ಪರಮ ಭಗವದ್ಭಕ್ತರಿದನಾದರದಿ ಕೇಳುವುದು ||

ಸ್ವಗತ ಸ್ವಾತಂತ್ರಿಯ ಗುಣವ ಹರಿ ತೆಗೆದು ಬ್ರಹ್ಮಾದ್ಯರಿಗೆ ಕೊಟ್ಟದು |ಭೃಗು ಮುನಿಪ ಪೇಳಿದನು ಇಂದ್ರದ್ಯುಮ್ನ ಕ್ಷಿತಿಪನಿಗೆ ||

ಪರಮ ವಿಷ್ಣು ಸ್ವತಂತ್ರ ಮಾಯಾ ತರುಣಿ ವಕ್ಷಸ್ಥಳ ನಿವಾಸಿಯು ಸರಸಿಜೋದ್ಭವ ಪ್ರಾಣರೀರ್ವರು ಸಚಿವರೆನಿಸುವರು | ಸರ್ವ ಕರ್ಮಗಳಲ್ಲಿ ತತ್ಪ್ರಿಯರುರಗಭೂಷಣಹಂಕೃತಿತ್ರಯ

ಕರೆಸುವರಮರೇಂದ್ರಾರ್ಕಮುಖರಿಂದ್ರಿಯವರೆನಿಸುವರು ||1||

ಈ ದಿವೌಕಸರಂತೆ ಕಲಿ ಮೊದಲಾದ ದೈತ್ಯರು ಸರ್ವದೇಹದಿ ತೋದಕರು ತಾವಾಗಿ ವ್ಯಾಪಾರಗಳ ಮಾಡುವರು | ವೇಧನಂದದಿ ಕಲಿಯಹಂಕಾರಾಧಿಪಾಧಮ ಮಧುಕುಕೈಟಭ ಕ್ರೋಧಿಶಂಭರಮುಖರು ಮನಸಿಗೆ ಸ್ವಾಮಿಯೆನಿಸುವರು ||2||

ದೇವತೆಗಳೋಪಾದಿ ನಿತ್ಯದಿ ಏವಮಾದಿ ಸ್ವನಾಮದಿಂದಲಿ ಯಾವದಿಂದ್ರಿಯಗಳೊಳು ವ್ಯಾಪಾರಗಳ ಮಾಡುವರು | ಸೇವಕರ ಸೇವಾನುಗುಣ ಫಲವೀವ ಗ್ರುಪನಂದದಲಿ ತನ್ನ ಸ್ವಭಾವ ಸ್ವಾತಂತ್ರಿಯ ವಿಭಾಗವ ಮಾಡಿಕೊಟ್ಟ ಹರಿ ||3||

ಅಗಣಿತ ಸ್ವಾತಂತ್ರ್ಯವ ನಾಲ್ಕಗೆ ವಿಭಾಗವ ಮಾಡಿ ಒಂದನು ತೆಗೆದು ದಶವಿಧಗೈಸಿ ಪಾದರೆ ಪಂಚ ಪ್ರಾಣನಲಿ | ಮೊಗಚತುಷ್ಟಯನೊಳು ಸಪಾದ್ಯದುಗುಣವಿರಿಸಿದ ಮತ್ತೆ ದಶವಿಧ ಯುಗಳ ಗುಣವನು ಮಾಡಿ ಎರಡು ಸದಾಶಿವನೊಳಿಟ್ಟ ||4||

ಪಾಕಶಾಸನ ಕಾಮರೊಳು ಸಾರ್ಧಕವಿಟ್ಟ ದಶೇಂದ್ರಿಯರ ಸುದಿವೌಕಸಾದ್ಯರೊಳೊಂದು ಯಾವಜೀವರೊಳಗೊಂದು | ನಾಲ್ಕುವರೆ ಕಲ್ಯಾದಿ ದೈತ್ಯಾನೀಕಕಿತ್ತನು ಎರಡು

ತ್ರಿವಿಧ ವಿವೇಕಗೈಸಿಂದಿರೆಗೆ ಒಂದೆರಡಾತ್ಮ ತನ್ನೊಳಗೆ ||5||

ಈ ವಿಧದಿ ಸ್ವಾತಂತ್ರತತ್ವವ ದೇವಮಾನವದಾನವರೊಳು ರಮಾವಿನೋದಿ ವಿಭಾಗ ಮಾಡಿಟ್ಟಲ್ಲೆ ರಮಿಸುವನು | ಮೂವರೊಳಗಿದ್ದವರ ಕರ್ಮವ ತಾ ವಿಕಾರವಗೈಸದಲೆ ಕಲ್ಪಾವಸಾನಕೆ ಕೊಡುವನಾಯಾಸವರವರ ಗತಿಯ ||6||

ಆಲಯಗಳೊಳಗಿಪ್ಪ ದೀಪ ಜ್ವಾಲೆವರ್ತಿಗಳನುಸರಿಸಿ ಜನರಾಲಿಗಳಿಗೊಪ್ಪುವ ತೆರದಿ ಹರಿ ತೋರ್ಪ ಸರ್ವತ್ರ | ಕಾಲಕಾಲದಿ ಶ್ರೀಧರಾ ದುರ್ಗಾಲಲನೆಯರ ಕೂಡಿ ಸುಖಮಯ ಲೀಲೆಗೈಯಲು ತ್ರಿಗುಣಕಾರ್ಯಗಳಹವು ಜೀವರಿಗೆ ||7||

ಇಂದ್ರಿಯಗಳಿಂ ಮಾಳ ಕರ್ಮದ್ವಂದ್ವಗಳ ತನಗರ್ಪಿಸಲು ಗೋವಿಂದ ಪುಣ್ಯವ ಕೊಂಡು ಪಾಪವ ಭಸ್ಮವನೆ ಮಾಳ | ಇಂದಿರೇಶನು ಭಕ್ತ ಜನರನು ನಿಂದಿಸುವರೊಳಗಿಪ್ಪ ಪುಣ್ಯವ

ತಂದು ತನ್ನವಗೀವ ಪಾಪಗಳವರಿಗುಣಿಸುವನು ||8||

ಹೊತ್ತು ಹೊತ್ತಿಗೆ ಪಾಪಕರ್ಮ ಪ್ರವರ್ತಕರ ನಿಂದಿಸದೆ ತನಗಿಂದುತ್ತಮರ ಗುಣಕರ್ಮಗಳ ಕೊಂಡಾಡದಲೆ ಇಪ್ಪ | ಮರ್ತ್ಯರಿಗೆ ಗೋಬ್ರಾಹ್ಮಣ ಹತ್ಯ ಮೊದಲಾದಖಿಳ ದೋಷಗಳಿಪನು ಸಂದೇಹಪಡಸಲ್ಲಖಿಳ ಶಾಸ್ತ್ರಮತ ||9||

ತನ್ನ ಸ್ವಾತಂತ್ರ್ಯಗುಣಗಳ ಹಿರಣ್ಯ ಗರ್ಭಾದ್ಯರಿಗೆ ಕಲಿಮುಖ ದಾನವರ ಸಂತತಿಗೆ ಅವರಧಿಕಾರವನುಸರಿಸಿ | ಪುಣ್ಯಪಾಪಗಳೀವ ಬಹುಕಾರುಣ್ಯ ಸಾಗರನಲ್ಪಶಕ್ತಿಗಳ ಉಣ್ಣಲರಿಯದೆ ಇರಲು ಉಣಗಲಿಸಿದನು ಸರ್ವರಿಗೆ ||10||

ಸತ್ಯವಿಕ್ರಮ ಪುಣ್ಯಪಾಪ ಸಮಸ್ತರಿಗೆ ಕೊಡಲೋಸುಗದಿ ನಾಲ್ವತ್ತು ಭಾಗವ ಮಾಡಿ ಲೇಶಾಂಶವನು ಜನಕೀವ | ಅತ್ಯಲ್ಪ ಪರಮಾಣು ಜೀವಗೆ ಸಾಮರ್ಥ್ಯವನ್ನು ತಾಕೊಟ್ಟು ಸ್ಥಲಪದಾರ್ಥಗಳ ಉಂಡುಣಿಪ ಸರ್ವದ ಸರ್ವಜೀವರಿಗೆ ||11||

ತಿಮಿರ ತರಣೀಗಳೇಕದೇಶದಿ ಸಮನಿಸಿಪ್ಪವೆ ಎಂದಿಗಾದರು ಭ್ರಮಣ ಛಳಿ ಬಿಸಿಲಂಜಿಕೆಗಳುಂಟೇನೋ ಪರ್ವತಕೆ | ಅಮಿತ ಜೀವರೊಳಿದ್ದು ಲಕುಮೀರಮಣ ವ್ಯಾಪಾರಗಳ ಮಾಡುವ ಕಮಲಪತ್ರ ಸರೋವರಗಳೊಳಗಿಪ್ಪ ತೆರದಂತೆ ||12||

ಅಂಬುಜೋದ್ಭವ ಮುಖ್ಯಸುರ ಕಲಿ ಶಂಬರಾದಿ ಸಮಸ್ತ ದೈತ್ಯ ಕದಂಬಕನುದಿನ ಪುಣ್ಯಪಾಪ ವಿಭಾಗವನೆ ಮಾಡಿ |

ಅಂಬುಧಿಯ ಜಲವಣು ಮಹಾಘಟದಿಂಬನಿತು ತುಂಬುವ ತೆರದಿ ಪ್ರತಿಬಿಂಬರೊಳು ತಾನಿದ್ದು ಯೋಗ್ಯತೆಯಂತೆ ಫಲವೀವ ||13||

ಇನಿತು ವಿಷ್ಣು ರಹಸ್ಯದೊಳು ಭೃಗುಮುನಿಪ ಇಂದ್ರದ್ಯುಮ್ನ ಗರುಪಿದದನು ಬುಧರು ಕೇಳುವದು ನಿತ್ಯದಿ ಮತ್ಸರವ ಬಿಟ್ಟು | ಅನುಚಿತೋಕ್ತಿಗಳಿದ್ದರೆಯು ಸರಿ ಗಣನೆ ಮಾಡದಿರೆಂದು ವಿದ್ವಜ್ಜನಕೆ ವಿಜ್ಞಾಪನೆಯ ಮಾಡುವೆ ವಿನಯಪೂರ್ವಕದ ||14||

ವೀತಭಯ ವಿಶ್ವೇಶ ವಿಧಿಪಿತ ಮಾತುಳಾಂತಕ ಮಧ್ವವಲ್ಲಭ ಭೂತಭಾವನನಂತ ಭಾಸ್ಕರತೇಜ ಮಹಾರಾಜ | ಗೌತಮನ ಮಡದಿಯನು ಕಾಯ್ದಾನಾಥರಕ್ಷಕ ಗುರುತಮ ಜಗನ್ನಾಥವಿಠಲ ತನ್ನ ನಂಬಿದ ಭಕುತರನು ಪೊರೆವ ||15||

ಹರಿಕಥಾಮೃತಸಾರ ಗುರುಗಳ ಕರುಣದಿಂದಾಪನಿತು ಪೇಳುವೆ |

ಪರಮ ಭಗವದ್ಭಕ್ತರಿದನಾದರದಿ ಕೇಳುವುದು ||